ಶ್ರೀ ಆರ್.ವಿ. ದೇಶಪಾಂಡೆ:- ಅವೆಲ್ಲಾ ಅನ್ನಲರೀಸ್. ಅವರ ಮೇಲೆ ಸರ್ಕಾರಕ್ಕೆ ಕಂಟ್ರೋಲ್ ಇಲ್ಲ, ಸರ್ಕಾರದ ಸ್ವಾಮಿತ್ವವೂ ಇಲ್ಲ. ಹಾಗಾಗಿ ಆ ಪ್ರಶ್ನೆ ಉದ್ಭವಿಸುವುದಿಲ್ಲ. ಇವತ್ತು 122 ಕೋಟಿ ರೂಪಾಯಿ ಮೈಸೂರು ಲ್ಯಾಂಪ್ಸ್‌ನದ್ದು ಸೇಲ್ಸ್ ಟ್ಯಾಕ್ಸ್, ಪ್ರಾವಿಡೆಂಟ್ ಫಂಡ್ ಇದಕ್ಕೆ ರಾಜ್ಯಸರ್ಕಾರ ಕೊಡಬೇಕಾಗಿದೆ. Accumulated loss is Rs.92 crores.

ಉಪಾಧ್ಯಕ್ಷರು:- ಮಾನ್ಯ ವಿ. ಪಾಪಣ್ಣ ಅವರ ಪ್ರಶ್ನೆ ಸಂಖ್ಯೆ 2189 ಮತ್ತು ಬಿ.ಬಿ. ಶಿವಪ್ಪ ಅವರ ಪ್ರಶ್ನೆ ಸಂಖ್ಯೆ 1416-ಇವುಗಳನ್ನು ತಡೆಹಿಡಿಯಲಾಗಿದೆ. ಇನ್ನು ಮುಂದೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ):- ಮಾನ್ಯ ಉಪಾಧ್ಯಕ್ಷರೆ, ದಿನಾಂಕ 20-3-2003ರಲ್ಲಿ ಲಿಖಿತ ಮೂಲಕ ಉತ್ತರಿಸುವ ಹದಿನಾಲ್ಕನೇ ಪಟ್ಟಿಯ ಉತ್ತರಿಸಬೇಕಾದ 68 ಪ್ರಶ್ನೆಗಳ ಪೈಕಿ 62 ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು:- ಮಂಡಿಸಲಾಯಿತು.

ಅನುಬಂಧ-1

4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ):- ಮಾನ್ಯ ಉಪಾಧ್ಯಕ್ಷರೆ ಮಾನ್ಯ ಮುಖ್ಯಮಂತ್ರಿಗಳ ಹೆಸರಿನಲ್ಲಿ ಇರತಕ್ಕಂಥ ಕೆಳಕಾಣಿಸಿದ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ:

1. ಕರ್ನಾಟಕ ಕಾರಾಗೃಹಗಳ ಸೇವೆ (ನೇಮಕಾತಿ) ನಿಯಮಗಳನ್ನು 2002ನ್ನು ರಚಿಸಿ ದಿನಾಂಕ 17-12-2002 ರಂದು ಹೊರಡಿಸಲಾದ ಡಿಪಿಎಆರ್:102: ಎಸ್‌ಆರ್‌ಡಿ: 97ನೇ ಸಂಖ್ಯೆಯ ಅಧಿಸೂಚನೆ;
2. ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳನ್ನು 1977ರ ನಿಯಮ 5(5)ಕ್ಕೆ ತಿದ್ದುಪಡಿ ಮಾಡಿ ದಿನಾಂಕ 29-1-2003 ರಂದು ಹೊರಡಿಸಲಾದ ಡಿಪಿಎಆರ್:74:ಎಸ್‌ಆರ್‌ಡಿ:2002ನೇ ಸಂಖ್ಯೆಯ ಅಧಿಸೂಚನೆ;

1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ 39ರ ಪ್ರಕರಣದ ಮೇರೆಗೆ:

3. ಮೆ: ರೇವಾ ಎಲೆಕ್ಟ್ರಿಕ್ ಕಾರ್ ಕಂಪನಿ ಪ್ರೈವೇಸ್ ಲಿಮಿಟೆಡ್‌ನವರು ಸಿದ್ಧ ವಸ್ತುಗಳನ್ನು ತಯಾರಿಸಿ ಮಾರಾಟದ ಮೇಲೆ ಪಾವತಿಸಬೇಕಾದ ತೆರಿಗೆಗೆ 7 ವರ್ಷಗಳವರೆಗೆ ವಿನಾಯಿತಿ ಅಥವಾ 9 ವರ್ಷಗಳವರೆಗೆ ಮಾರಾಟ ತೆರಿಗೆ ಪಾವತಿ ಮುಂದೂಡಿಕೆಯನ್ನು ವಾಣಿಜ್ಯ ಉತ್ಪಾದನೆ ಪ್ರಾರಂಭವಾದ ದಿನಾಂಕದಿಂದ ಜಾರಿಗೆ ಬರುವಂತೆ ಕೆಲವು ನಿರ್ಬಂಧನೆಗಳು ಮತ್ತು ಷರತ್ತುಗಳಿಗೊಳಪಡಿಸಿ, ವಿನಾಯಿತಿ ನೀಡಿ ದಿನಾಂಕ 11-2-2003 ರಂದು ಹೊರಡಿಸಲಾದ ಎಫ್‌ಡಿ:7:ಸಿಎಸ್‌ಎಲ್:2003 (1)ನೇ ಸಂಖ್ಯೆಯ ಅಧಿಸೂಚನೆ;

4. ಮೆ: ರೇವಾ ಎಲೆಕ್ಟ್ರಿಕ್ ಕಾರ್ ಕಂಪನಿ ಪ್ರೈವೇಸ್ ಲಿಮಿಟೆಡ್‌ನವರು ಮಾರಾಟ ಮಾಡುವ ಕಚ್ಚಾ ಸರಕುಗಳ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಗೆ ವಾಣಿಜ್ಯ ಉತ್ಪಾದನೆ ಪ್ರಾರಂಭವಾದ ದಿನಾಂಕದಿಂದ ಜಾರಿಗೆ ಬರುವಂತೆ 7 ವರ್ಷಗಳವರೆಗೆ ಕೆಲವೊಂದು ನಿರ್ಬಂಧನೆಗಳು ಮತ್ತು ಷರತ್ತುಗಳಿಗೊಳಪಡಿಸಿ ವಿನಾಯಿತಿ ನೀಡಿ ದಿನಾಂಕ 11-2-2003 ರಂದು ಹೊರಡಿಸಲಾದ ಎಫ್‌ಡಿ:7:ಸಿಎಸ್‌ಎಲ್:2003 (2)ನೇ ಸಂಖ್ಯೆಯ ಅಧಿಸೂಚನೆ;

5. ಮೆ: ರೇವಾ ಎಲೆಕ್ಟ್ರಿಕ್ ಕಾರ್ ಕಂಪನಿ ಪ್ರೈವೇಸ್ ಲಿಮಿಟೆಡ್‌ನವರು ಅಂತರರಾಜ್ಯ ವ್ಯಾಪಾರ ಅಥವಾ ವಾಣಿಜ್ಯದಲ್ಲಿ ಸಿದ್ಧ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವ ವಸ್ತುಗಳ ಮೇಲೆ ಪಾವತಿಸಬೇಕಾದ ಕೇಂದ್ರ ಮಾರಾಟ ತೆರಿಗೆಗೆ ವಾಣಿಜ್ಯ ಉತ್ಪಾದನೆ ಪ್ರಾರಂಭವಾದ ದಿನಾಂಕದಿಂದ ಜಾರಿಗೆ ಬರುವಂತೆ 7 ವರ್ಷಗಳವರೆಗೆ ವಿನಾಯಿತಿ ಅಥವಾ 9 ವರ್ಷಗಳವರೆಗೆ ಮಾರಾಟ ತೆರಿಗೆ ಪಾವತಿ ಮುಂದೂಡಿ ಕೆಲವು ನಿರ್ಬಂಧನೆಗಳು ಮತ್ತು ಷರತ್ತುಗಳಿಗೊಳಪಡಿಸಿ ವಿನಾಯಿತಿ ನೀಡಿ ದಿನಾಂಕ 11-2-2003 ರಂದು ಹೊರಡಿಸಲಾದ ಎಫ್‌ಡಿ:7:ಸಿಎಸ್‌ಎಲ್:2003 (3)ನೇ ಸಂಖ್ಯೆಯ ಅಧಿಸೂಚನೆ;

6. ಬೆಂಗಳೂರಿನ ಮಲ್ಲೇಶ್ವರಂನ ಆಟದ ಮೈದಾನದಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದವರಿಂದ ದಿನಾಂಕ 8-3-2001 ರಿಂದ 11-3-2001 ರವರೆಗೆ ನಡೆದ ವಸ್ತು ಪ್ರದರ್ಶನದಲ್ಲಿ ಮಾರಾಟದ ಮೇಲೆ ಪಾವತಿಸಬೇಕಾದ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 22-3-2001 ರಂದು ಹೊರಡಿಸಲಾದ ಎಫ್‌ಡಿ:64:ಸಿಎಸ್‌ಎಲ್:2001ನೇ ಸಂಖ್ಯೆಯ ಅಧಿಸೂಚನೆ;

7. ಬೆಂಗಳೂರಿನ ಮೆ: ಮದರ್ ಡೈರಿ ಫ್ರೂಟ್ ಅಂಡ್ ವೆಜಿಟೇಬಲ್ ಲಿಮಿಟೆಡ್‌ನವರು ಕ್ಯಾಪ್ಟೀವ್ ಪವರ್ ಜನರೇಷನ್‌ನಲ್ಲಿ ಉಪಯೋಗಿಸುವ ಇಂಧನದ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಯನ್ನು ವಾಣಿಜ್ಯ ಉತ್ಪಾದನೆ ಪ್ರಾರಂಭವಾದ ದಿನಾಂಕದಿಂದ 12 ವರ್ಷಗಳವರೆಗೆ ಕೆಲವು ಷರತ್ತುಗಳು ಮತ್ತು ನಿರ್ಬಂಧನೆಗಳಿಗೊಳಪಡಿಸಿ ಶೇಕಡ 4ಕ್ಕೆ ಕಡಿಮೆಗೊಳಿಸಿ ದಿನಾಂಕ 19-2-2003 ರಂದು ಹೊರಡಿಸಲಾದ ಎಫ್‌ಡಿ:14:ಸಿಇಟಿ:2002 (1)ನೇ ಸಂಖ್ಯೆಯ ಅಧಿಸೂಚನೆ;

8. ಬಯೋ-ಸಿಂಥೆಟಿಕ್ ಹ್ಯೂಮನ್ ಗ್ರೋಥ್ ಹಾರ್ಮೋನ್‌ನ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 3-3-2003 ರಂದು ಹೊರಡಿಸಲಾದ ಎಫ್‌ಡಿ:159 :ಸಿಎಸ್‌ಎಲ್ :2002ನೇ ಸಂಖ್ಯೆಯ ಅಧಿಸೂಚನೆ;

9. ರಾಜ್ಯದಲ್ಲಿರುವ ಕೈಗಾರಿಕಾ ಘಟಕಗಳು ಕೇಬಲ್ಸ್ ಮತ್ತು ಕಂಡಕ್ಟರ್‌ಗಳ ತಯಾರಿಕೆಯಲ್ಲಿ ಉಪಯೋಗಿಸುವ ಅಲ್ಯೂಮಿನಿಯಂ ಇಂಗಾಟ್ಸ್, ಬಿಲೆಟ್ಸ್ ಮತ್ತು ವೈರ್ ರಾಡ್ಸ್‌ಗಳ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಯನ್ನು ಕೆಲವು

ಷರತ್ತುಗಳಿಗೊಳಪಡಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಶೇಕಡ 2ರಷ್ಟು ಕಡಿಮೆಗೊಳಿಸಿ ದಿನಾಂಕ 5-3-2003 ರಂದು ಹೊರಡಿಸಲಾದ ಎಫ್‌ಡಿ:36:ಸಿಎಸ್‌ಎಲ್:2003ನೇ ಸಂಖ್ಯೆಯ ಅಧಿಸೂಚನೆ;

1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ 31ರ ಪ್ರಕರಣದ ಮೇರೆಗೆ:

10. ಮೆ: ರೇವಾ ಎಲೆಕ್ಟ್ರಿಕ್ ಕಾರ್ ಕಂಪನಿ ಪ್ರೈವೇಸ್ ಲಿಮಿಟೆಡ್‌ನವರು ರೇವಾ ಎಲೆಕ್ಟ್ರಿಕ್ ಕಾರ್‌ಗಳ ತಯಾರಿಕೆಯಲ್ಲಿ ಉಪಯೋಗಿಸುವ ಕಚ್ಚಾ ಸರಕುಗಳು ಮತ್ತು ಕಾಂಪೊಸೆಂಟ್‌ಗಳ ಪ್ರವೇಶದ ಮೇಲೆ ಪಾವತಿಸಬೇಕಾದ ಪ್ರವೇಶ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ವಾಣಿಜ್ಯ ಉತ್ಪಾದನೆ ಪ್ರಾರಂಭವಾದ ದಿನಾಂಕದಿಂದ 7 ವರ್ಷಗಳವರೆಗೆ ಕೆಲವು ನಿರ್ಬಂಧನೆಗಳು ಮತ್ತು ಷರತ್ತುಗಳಿಗೊಳಪಡಿಸಿ ವಿನಾಯಿತಿ ನೀಡಿ ದಿನಾಂಕ 11-2-2003 ರಂದು ಹೊರಡಿಸಲಾದ ಎಫ್‌ಡಿ:7:ಸಿಎಸ್‌ಎಲ್: 2003(4)ನೇ ಸಂಖ್ಯೆಯ ಅಧಿಸೂಚನೆ;

11. ಮೆ: ರೇವಾ ಎಲೆಕ್ಟ್ರಿಕ್ ಕಾರ್ ಕಂಪನಿ ಪ್ರೈವೇಸ್ ಲಿಮಿಟೆಡ್‌ನವರು ಯಂತ್ರಗಳು ಮತ್ತು ಸರಕುಗಳ ಪ್ರವೇಶದ ಮೇಲೆ ಪಾವತಿಸಬೇಕಾದ ಪ್ರವೇಶ ತೆರಿಗೆಗೆ ವಾಣಿಜ್ಯ ಉತ್ಪಾದನೆ ಪ್ರಾರಂಭವಾದ ದಿನಾಂಕದಿಂದ 5 ವರ್ಷಗಳವರೆಗೆ ಕೆಲವು ನಿರ್ಬಂಧನೆಗಳು ಮತ್ತು ಷರತ್ತುಗಳಿಗೊಳಪಡಿಸಿ ವಿನಾಯಿತಿ ನೀಡಿ ದಿನಾಂಕ 11-2-2003 ರಂದು ಹೊರಡಿಸಲಾದ ಎಫ್‌ಡಿ:7:ಸಿಎಸ್‌ಎಲ್:2003 (5)ನೇ ಸಂಖ್ಯೆಯ ಅಧಿಸೂಚನೆ;

12. ಬೆಂಗಳೂರಿನ ಕನ್ನಮಂಗಲದಲ್ಲಿರುವ ಮೆ: ಮದರ್ ಫ್ರೂಟ್ ಅಂಡ್ ವೆಜಿಟೇಬಲ್ ಲಿಮಿಟೆಡ್‌ನವರು ಸ್ಥಳೀಯ ಪ್ರದೇಶದಲ್ಲಿ ಯಂತ್ರಗಳು, ಸಾಧನ ಸಾಮಗ್ರಿ, ಬಂಡವಾಳ ಸರಕುಗಳು ಮತ್ತು ರಚನಾತ್ಮಕ ಸರಕುಗಳು ಪ್ರವೇಶದ ಮೇಲೆ ಪಾವತಿಸಬೇಕಾದ ತೆರಿಗೆಗೆ 3 ವರ್ಷಗಳವರೆಗೆ ಅಥವಾ ಯೋಚನೆ ಪೂರ್ಣಗೊಳ್ಳುವ ದಿನಾಂಕದವರೆಗೆ ವಿನಾಯಿತಿ ನೀಡಿ ದಿನಾಂಕ 19-2-2003 ರಂದು ಹೊರಡಿಸಲಾದ ಎಫ್‌ಡಿ:14:ಸಿಇಟಿ:2002(2)ನೇ ಸಂಖ್ಯೆಯ ಅಧಿಸೂಚನೆ;

1979ರ ಕರ್ನಾಟಕ ವಿಲಾಸ ತೆರಿಗೆ ಕಾಯ್ದೆ 20ಎ ಪ್ರಕರಣದ ಮೇರೆಗೆ:

13. ಕರ್ನಾಟಕ ಕೇರಳ ಮತ್ತು ಗೋವಾಡ ಉಪಪ್ರದೇಶದ ಕೇಂದ್ರ ಕಛೇರಿಯಲ್ಲಿ ದಿನಾಂಕ 14-1-2003 ರಿಂದ 16-1-2003 ರವರೆಗೆ 3 ದಿನಗಳವರೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ಹಾಜರಾಗುವ ಗೌರವಾನ್ವಿತರಿಗೆ ಹೋಟೆಲ್‌ಗಳಲ್ಲಿ ಒದಗಿಸುವ ವಿಲಾಸದ ಮೇಲೆ ಹೋಟೆಲ್‌ನ ಮಾಲೀಕರು ಪಾವತಿಸಬೇಕಾದ ವಿಲಾಸ ತೆರಿಗೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ವಿನಾಯಿತಿ ನೀಡಿ ದಿನಾಂಕ 25-2-2003 ರಂದು ಹೊರಡಿಸಲಾದ ಎಫ್‌ಡಿ:23: ಸಿಎಲ್‌ಟಿ:2002ನೇ ಸಂಖ್ಯೆಯ ಅಧಿಸೂಚನೆ;

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ:

14. ಕರ್ನಾಟಕ ಸರ್ಕಾರಿ ನೌಕರರ (ಕುಟುಂಬ ನಿವೃತ್ತಿ ವೇತನ) ನಿಯಮಗಳು, 2002ನ್ನು ರಚಿಸಿ ದಿನಾಂಕ 4-1-2003 ರಂದು ಹೊರಡಿಸಲಾದ ಆಇ:4:ಸನಿತಿ:2000ನೇ ಸಂಖ್ಯೆಯ ಅಧಿಸೂಚನೆ;

15. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 285(2) (15)ಕ್ಕೆ ತಿದ್ದುಪಡಿ ಮಾಡಿ ದಿನಾಂಕ 24-12-2002 ರಂದು ಹೊರಡಿಸಲಾದ ಆಇ:1:ಸನಿತಿ:2002ನೇ ಸಂಖ್ಯೆಯ ಅಧಿಸೂಚನೆ;

16. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 489ಕ್ಕೆ ತಿದ್ದುಪಡಿ ಮಾಡಿ ದಿನಾಂಕ 17-12-2002 ರಂದು ಹೊರಡಿಸಲಾದ ಆಇ:6:ಸನಿತಿ:2002ನೇ ಸಂಖ್ಯೆಯ ಅಧಿಸೂಚನೆ;

17. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 68ಕ್ಕೆ ತಿದ್ದುಪಡಿ ಮಾಡಿ ದಿನಾಂಕ 17-12-2002 ರಂದು ಹೊರಡಿಸಲಾದ ಆಇ:2:ಸನಿತಿ:2002ನೇ ಸಂಖ್ಯೆಯ ಅಧಿಸೂಚನೆ;

1958ರ ಕರ್ನಾಟಕ ಮನರಂಜನಾ ತೆರಿಗೆ ಕಾಯ್ದೆ 30(5)ರ ಪ್ರಕರಣದ ಮೇರೆಗೆ:

163. ಕರ್ನಾಟಕ ಮನರಂಜನಾ ತೆರಿಗೆ ನಿಯಮಗಳು 1959ರಲ್ಲಿ ಕೆಲವು ನಿಯಮಗಳಿಗೆ ತಿದ್ದುಪಡಿ ಮಾಡಿ ಹಾಗೂ ಹೊಸದಾಗಿ ಕೆಲವು ನಿಯಮಗಳನ್ನು ಸೇರ್ಪಡೆಗೊಳಿಸಿ ದಿನಾಂಕ 7-1-2003 ರಂದು ಹೊರಡಿಸಲಾದ ಎಫ್‌ಡಿ:39:ಸಿಇಎಕ್ಸ್:2002ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷರು:- ಮಂಡಿಸಲಾಯಿತು.

5. ಪ್ರಸ್ತಾವ

ಉಪಾಧ್ಯಕ್ಷರು:- ಪ್ರಸ್ತಾವವನ್ನು ಮಂಡಿಸುವುದು.

'2002ನೇ ಸಾಲಿನ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ ಜಂಟಿ ಸದನ ಪರಿಶೀಲನಾ ಸಮಿತಿಗೆ ಒಪ್ಪಿಸುವುದು.'

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ):- ಮಾನ್ಯ ಉಪಾಧ್ಯಕ್ಷರೆ, ನಾನು ಕೆಳಕಂಡ ಪ್ರಸ್ತಾವವನ್ನು ಮಂಡಿಸಬಯಸುತ್ತೇನೆ.

"2002ನೇ ಸಾಲಿನ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು 20 ಸದಸ್ಯರುಗಳನ್ನೊಳಗೊಂಡ, (15 ವಿಧಾನ ಸಭಾ ಸದಸ್ಯರು ಹಾಗೂ 5 ವಿಧಾನ ಪರಿಷತ್ತಿನ ಸದಸ್ಯರು) ಸಮಿತಿಯ ಸಹಮತಿಯನ್ನೂ ಪಡೆದು ಹಾಗೂ ಈ ಸದನದ ಕೆಳಕಂಡ ಸದಸ್ಯರುಗಳನ್ನು ಒಳಗೊಂಡ ಜಂಟಿ ಸದನ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂದು ಕೋರುತ್ತೇನೆ."

ಶ್ರೀಯುತರುಗಳಾದ:

1. ಯು.ಆರ್. ಸಭಾಪತಿ
2. ಡಿ.ಆರ್. ಪಾಟೀಲ್
3. ಜಬ್ಬಾರ್ ಖಾನ್ ಹೊನ್ನಳ್ಳಿ
4. ಕರಿಯಣ್ಣ
5. ನಂಜಯ್ಯನ ಮಠ ಎಸ್.ಜಿ.
6. ಗಂಡಸಿ ಶಿವರಾಮ್
7. ಶ್ರೀಮತಿ ಟಿ. ಭಾಗೀರಥಿ ಮರುಳಸಿದ್ದನಗೌಡ